site in which beneficiary live is entered in Demand register and revenue is paid;

c) What is the step taken from the Government for the same (provide details);

Sri V. Somanna (Minister for Housing) :

a) The mandate laid to the beneficiaries of Basava Housing scheme to construct the house is detailed below:

1. The site where the beneficiary constructs her house should be in her name and should have Hakku Patra or Khata for the same.
2. The said site should be mortgaged to the Government.
3. Should obtain license from GP for construction.
4. The house to be constructed should have min 200 sq.ft. & max. 400 sq.ft. plinth area.
5. They should be completed within 6 months from the date of obtaining work order from GP.
6. The selected beneficiary should produce Income and Caste certificate.

b) Yes.

c) A Proposal to give permission to site less beneficiaries under Basava and IAY to construct their houses in their cultivated land is under consideration of the Government.

ಅಂಗನವಾಡಿ ಮಕ್ಕಳಿಗೆ ಒದಗಿಸುತ್ತಿರುವ ಪೌಷ್ಟಿಕ ಆಹಾರ ವ್ಯವಸ್ಥೆ

856 (1129) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಒದಗಿಸುತ್ತಿರುವ ಪೌಷ್ಟಿಕ ಆಹಾರದ ಕುರಿತಾದ ಸರಬರಾಜಿನ ವಿವರಗಳು ಮತ್ತು ಅವುಗಳಿಗೆ

ಸರ್ಕಾರ ಮಾಡುತ್ತಿರುವ ಖರ್ಚುವೆಚ್ಚಗಳ ಮೊತ್ತ ಮತ್ತು ತಲವಾರು ಒದಗಿಸುತ್ತಿರುವ ಆಹಾರದ ವಿವರಗಳೇನು;

ಆ) ಸರಬರಾಜು ವ್ಯವಸ್ಥೆಗಾಗಿ ಸರ್ಕಾರ ಅನುಸರಿಸುತ್ತಿರುವ ನೀತಿ ನಿಯಮಗಳೇನು ಸರಬರಾಜು ವ್ಯವಸ್ಥೆಯನ್ನು ನಿರ್ವಹಿಸುತ್ತಿರುವ ಸಂಸ್ಥೆಗಳು ಯಾವುವು;

ಇ) ರಾಜ್ಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೂಲಕ ಅಪಾರ ಮೊತ್ತದ ಹಣವನ್ನು ವೆಚ್ಚ ಮಾಡಿ ಮಕ್ಕಳಲ್ಲಿನ ಪೌಷ್ಟಿಕತೆಯನ್ನು ಕಡಿಮೆ ಮಾಡಲು ಯೋಜನೆ ರೂಪಿಸಿದರೂ ಸಹ ಪ್ರಸ್ತುತ ಶೇಕಡಾ 50 ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿರಲು ಕಾರಣಗಳೇನು;

ಈ) ಪೌಷ್ಟಿಕ ಆಹಾರದ ಸರಬರಾಜಿನಲ್ಲಿ ಗುಣಮಟ್ಟದ ಕೊರತೆ ಇದೆಯೆ? ಗುಣಮಟ್ಟವನ್ನು ಪರೀಕ್ಷಿಸಲು ಸರ್ಕಾರ ಅನುಸರಿಸುತ್ತಿರುವ ಕ್ರಮವೇನು?

ಶ್ರೀ ಸಿ.ಸಿ. ಪಾಟೀಲ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಟಿಕ ಆಹಾರವನ್ನು ಸುಪ್ರೀಂ ಕೋರ್ಟ್ ನಿರ್ದೇಶದನ್ವಯ ಮಹಿಳಾ ಸ್ವಸಹಾಯ ಸಂಘಗಳಿಂದ ರಚಿತವಾದ 137 ನೋಂದಾಯಿತ ಮಹಿಳಾ ಪೂರಕ ಪೌಷ್ಟಿಕ ಆಹಾರ ಘಟಕಗಳಿಂದ ಸಿದ್ಧ ಪಡಿಸಿ CDPO ಕಛೇರಿಗೆ ಬೇಡಿಕೆಗನು ಗುಣವಾಗಿ ಸರಬರಾಜು ಮಾಡಲಾಗುವುದು. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಅಂಗನವಾಡಿ ಕೇಂದ್ರಗಳ ಫಲಾನುವಿಗಳ ಸಂಖ್ಯೆಯ ಆಧಾರದ ಮೇಲೆ ಆಹಾರ ಸಾಗಾಣಿಕೆದಾರರ ಮೂಲಕ ಅಂಗನವಾಡಿ ಕೇಂದ್ರಗಳಿಗೆ ಆಹಾರವನ್ನು ಸರಬರಾಜು ಮಾಡುತ್ತಾರೆ. ಈ ಸಾಲಿನ ಅಕ್ಟೋಬರ್ ಅಂತ್ಯಕ್ಕೆ ರೂ.405.19 ಕೋಟಿ ವೆಚ್ಚ ಭರಿಸಲಾಗುತ್ತದೆ.

ತಲಾವಾರು ಒದಗಿಸುತ್ತಿರುವ ಆಹಾರದ ಪ್ರಮಾಣದ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಸುಪ್ರೀಂ ಕೋರ್ಟ್ ನಿರ್ದೇಶನದನ್ವಯ ರಾಜ್ಯದಲ್ಲಿ 137 ಮಹಿಳಾ ಪೂರಕ ಪೌಷ್ಟಿಕ ಆಹಾರ ಘಟಕಗಳು ಆಹಾರವನ್ನು ಸರಬರಾಜು ಮಾಡುತ್ತಿರುತ್ತವೆ.

ಇ) ತಾಯಂದಿರಲ್ಲಿ ಅಜ್ಞಾನ, ಅನಕ್ಷರತೆ, ಬಡತನ ಇರುವುದು ಮತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯಿಲ್ಲದಿರುವುದು, ಬಾಲ್ಯ ವಿವಾಹ ಅಪೌಷ್ಟಿಕತೆಗೆ ಮುಖ್ಯ ಕಾರಣಗಳಾಗಿರುತ್ತವೆ.

ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಶೇ. 63.66 ರಷ್ಟು ಮಕ್ಕಳು ಸಾಮಾನ್ಯ ದರ್ಜೆಯಲ್ಲಿದ್ದು, ಶೇ.34.59 ರಷ್ಟು ಸಾಧಾರಣ ಕಡಿಮೆ ತೂಕ ಹೊಂದಿದ್ದು, ಶೇ. 1.75 ರಷ್ಟು ಮಕ್ಕಳು ಅತೀ ಕಡಿಮೆ ತೂಕ ಹೊಂದಿದವ ರಾಗಿರುತ್ತಾರೆ.

ರಾಜ್ಯ ಸರ್ಕಾರದ ವತಿಯಿಂದ ಮಕ್ಕಳಿಗೆ ರೂ.2/- ಹಾಗೂ ಕೇಂದ್ರ ಸರ್ಕಾರದ ವತಿಯಿಂದ ರೂ.2/-ನ್ನು ಮತ್ತು ಅತೀ ಕಡಿಮೆ ತೂಕ ಹೊಂದಿರುವ ಮಕ್ಕಳಿಗೆ ರಾಜ್ಯ ಸರ್ಕಾರದ ವತಿಯಿಂದ ರೂ.3/- ಹಾಗೂ ಕೇಂದ್ರ ಸರ್ಕಾರದ ವತಿಯಿಂದ ರೂ.3/- ಮೌಲ್ಯದ ಆಹಾರವನ್ನು ನೀಡಲಾಗುತ್ತದೆ. ಅಂಗನವಾಡಿ ಕೇಂದ್ರದಲ್ಲಿ ನೀಡುವ ಆಹಾರವು ಮಕ್ಕಳು ಮನೆಯಲ್ಲಿ ಸೇವಿಸುವ ಆಹಾರಕ್ಕೆ ಪೂರಕವಾಗಿದ್ದು, ಸಂಪೂರ್ಣ ಆಹಾರವಾಗಿರುವುದಿಲ್ಲ.

ಈ) ಈ ಆಹಾರದ ಗುಣಮಟ್ಟದಲ್ಲಿ ಕೊರತೆ ಇರುವುದಿಲ್ಲ. ಆಹಾರದ ಗುಣಮಟ್ಟ ಪರೀಕ್ಷಿಸಲು ಹಾಗೂ ಆಹಾರದ ಸ್ಯಾಂಪಲ್ ಗಳನ್ನು ವಿಶ್ಲೇಷಿಸಲು DFRL ಮೈಸೂರು ಮತ್ತು Food and Nutrition Board, Chennai ಗೆ ನಿಯಮಿತವಾಗಿ ಕಳುಹಿಸಲಾಗುತ್ತಿದೆ. ಗುಣಮಟ್ಟದ ಕೊರತೆಯ ಬಗ್ಗೆ ಯಾವುದೇ ವರದಿ ಸ್ವೀಕೃತವಾಗಿರುವುದಿಲ್ಲ.

ಅನುಬಂಧ

ಪೂರಕ ಪೌಷ್ಟಿಕ ಆಹಾರದ ವೇಳಾಪಟ್ಟಿ

ಕ್ರಸ	ಫಲಾನುಭವಿಗಳ ವಿವರ	ಪೂರಕ ಪೌಷ್ಟಿಕ ಆಹಾರದ ವಿವರ	ದಿನಕ್ಕೆ ನೀಡಬೇಕಾದ ಪ್ರಮಾಣ ಪ್ರತಿ ಫಲಾನುಭವಿಗೆ	ವಾರದಲ್ಲಿ ಹ ಚಬೇಕಾದ ದಿವಗಳು
1	6ತಿ ಗಳಿ ದ-3ವರ್ಷದ ಮಕ್ಕಳು	ಅಮಲೇಸ್ಡ್ ಶಕ್ತಿ ಯುತ ಆಹಾರ	98ಗ್ರಾ ಗಳು	6 ದಿವಗಳು
2	ಗರ್ಭಿಣಿ/ಬಾಣ ತಿ/ ಪ್ರಾ ಯಪೂರ್ವ ಬಾಲಕಿ ಯರು ಹಾಗೂ ಅ ಗ ನವಾಡಿ ಕಾ ರ್ಯಕರ್ತೆ ಮತ್ತು ಸಹಾ ಯಕಿ ಯರು	ಶಕ್ತಿ ಯುತ ಆಹಾರ	122ಗ್ರಾ ಗಳು	2ದಿವಗಳು
		ನ್ಯೂಟ್ರಿ ಕೇಸರಿಭಾತ್	78ಗ್ರಾ ಗಳು	2ದಿವಗಳು
		ನ್ಯೂಟ್ರಿ ಬಿಸಿಬೆಳಿಭಾತ್ ಅಕ್ಕಿ ಹೋಗರಿಬೆಳೆ ಮಸಾಲ ಮಿಶ್ರಣ	95ಗ್ರಾ ಗಳು 56ಗ್ರಾ 10ಗ್ರಾ 29ಗ್ರಾ	2ದಿವಗಳು

3.3ವರ್ಷದಿ ದ -6ವರ್ಷದ ಮಕ್ಕಳು

ವಾರಗಳು	ಮಧ್ಯಾಹ್ನ 12.30		ಮಧ್ಯಾಹ್ನ 3.30 ವೇಳೆಗೆ	
	ಪೂರಕ ಪೌಷ್ಟಿಕ ಆಹಾರದ ವಿವರ	ದಿನಕ್ಕೆ ನೀಡಬೇಕಾದ ಪ್ರಮಾಣ	ಪೂರಕ ಪೌಷ್ಟಿಕ ಆಹಾರದ ವಿವರ	ದಿನಕ್ಕೆ ನೀಡಬೇಕಾದ ಪ್ರಮಾಣ
ಸೋಮವಾರ ಬುಧವಾರ ಶುಕ್ರವಾರ	ನ್ಯೂಟ್ರಿ ಬಿಸಿಬೆಳಿಭಾತ್ ಅಕ್ಕಿ ಹೋಗರಿಬೆಳೆ ಮಸಾಲ ಮಿಶ್ರಣ	50ಗ್ರಾ 35ಗ್ರಾ 4ಗ್ರಾ 11ಗ್ರಾ	ಶಕ್ತಿ ಯುತ ಆಹಾರ	50ಗ್ರಾ
ಮ ಗಳವಾರ ಗುರುವಾರ ಶನಿವಾರ	ನ್ಯೂಟ್ರಿ ಕೇಸರಿಭಾತ್	40ಗ್ರಾ	ನ್ಯೂಟ್ರಿ ಕಾರನ್ ಪಾಪ್	22ಗ್ರಾ